**ದಿನಾಂಕ 05.08.2026 ರಂದು ಸಾಕ್ಷಿಗೆ ಪ್ರಮಾಣ ವಚನವನ್ನು ಬೋಧಿಸಲಾಯಿತು.**

**ಪಾಟೀಸವಾಲುಃ ಶ್ರೀ ಎಂ ಆರ್ ಅರ್ಜಿದಾರರ ಪರ ವಕೀಲರಿಂದಃ**

ನಾನು ಈ ಪ್ರಕರಣದ ಅಪಘಾತದ ಪೊಲಿಸು ದಾಖಲೆಗಳನ್ನು ಪರಿಶೀಲಿಸಿರುತ್ತೇನೆ. ಅಪಾದಿತ ಟ್ರಾಕ್ಟರ್ ಮತ್ತು ಟ್ರೈಲರ್ ಗೆ ನಮ್ಮ ಕಂಪನಿಯಿಂದ ವಿಮಾ ಪಾಲಿಸಿ ಕೊಡಲಾಗಿದೆ ಎಂದರೆ ಟ್ರಾಕ್ಟರ್ ಗೆ ಮಾತ್ರ ಕೊಟ್ಟಿದ್ದು ಟ್ರೈಲರ್ ಗೆ ಕೊಟ್ಟಿರುವುದಿಲ್ಲ ಎಂದು ಹೇಳುತ್ತಾರೆ. ನಾನು ಹಾಜರುಪಡಿಸಿರುವ ನಿ ಆರ್ ಪ್ರಕಾರ ಟ್ರೈಲರ ಗೆ ಪಾಲಿಸಿ ಪ್ರೀಮಿಯಂ ಪಡೆದಿರುತ್ತೇವೆ ಎಂದರೆ ಸರಿ. ಪೊಲಿಸು ದೂರಿನಲ್ಲಿ ಟ್ರಾಕ್ಟರ್ ಗೆ ಹೊಸ ಟ್ರೈಲರ್ ಇದ್ದು ಅದಕ್ಕೆ ನಂಬರ್ ಇರುವುದಿಲ್ಲ ಎಂದು ನಮೂದಿಸಲಾಗಿದೆ ಎಂದರೆ ಸರಿಯಲ್ಲ. ನಾವು ಪಾಲಿಸಿ ಕೊಡುವಾಗ ಹೊಸ ಟ್ರೈಲರ್ ಅಂತ ಪಾಲಿಸಿ ಕೊಟ್ಟಿರುತ್ತೇವೆ ಎಂದರೆ ಸರಿಯಲ್ಲ. ಟ್ರಾಕ್ಟರ್ ಮತ್ತು ಟ್ರೈಲರ್ ಮಂಡ್ಯ ಆರ್ ಟಿ ಒ ಕಚೇರಿಯಲ್ಲಿ ನೊಂದಣಿಯಾಗಿರುತ್ತವೆ ಎಂದರೆ ಸರಿ. ಟ್ರಾಕ್ಟರ್ ಮತ್ತು ಟ್ರೈಲರ್ ಗೆ ಸಂಬಂದಪಟ್ಟಂತೆ ಪಾಲಿಸಿ ಪ್ರತಿಗಳನ್ನು ಹಾಗೂ ಚಾಲಕನ ಚಾಲನಾ ಪರವಾನಿಗೆಯನ್ನು 2 ನೇ ಎದುರುದಾರರು ನ್ಯಾಯಾಲಯಕ್ಕೆ ಹಾಜರುಪಡಿಸಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ಪೊಲಿಸು ತನಿಖಾದಿಕಾರಿ ಟ್ರಾಕ್ಟರ್ ಮತ್ತು ಟ್ರೈಲರ್ ಚಾಲಕನ ತಪ್ಪಿನಿಂದ ಅಪಘಾತವಾಗಿದೆ ಎಂದು ದೋಷಾರೋಪಣ ಪತ್ರ ಸಲ್ಲಿಸಿರುತ್ತಾರೆ ಎಂದರೆ ಸರಿ. ಪೊಲಿಸು ತನಿಖಾದಿಕಾರಿ ಸಲ್ಲಿಸಿದ ದೋಷಾರೋಪಣ ಪತ್ರಕ್ಕೆ ನಮ್ಮ ತಕರಾರು ಇರುವುದಿಲ್ಲ ಎಂದರೆ ಸಾಕ್ಷಿ ನಾವು 3 ನೇ ಪಾರ್ಟಿಯಾಗಿರುವುದರಿಂದ ನಮ್ಮ ತಕರಾರು ಇಲ್ಲ ಎಂದು ಹೇಳುತ್ತಾರೆ. ಪೊಲೀಸರ

ದೋಷಾರೋಪಣ ಪತ್ರವನ್ನು ನಾವು ಎಲ್ಲಿಯೂ ಪ್ರಶ್ನಿಸಿರುವುದಿಲ್ಲ. ಟ್ರಾಕ್ಟರ್ ನಂತಹ ವಾಹನ ಮೋಟಾರು ಬೈಕ್‌ಗೆ ಡಿಕ್ಕಿ ಹೊಡೆದಾಗ ಮೋಟಾರು ಬೈಕ್ ಹಾನಿಗೊಳಗಾಗುತ್ತದೆಯೋ ಹೊರತು ಟ್ರಾಕ್ಟರ ಗೆ ಯಾವುದೇ ಹಾನಿ ಯಾಗುವುದಿಲ್ಲ ಎಂದರೆ ಟ್ರಾಕ್ಟರಗೆ ತರಚಿದ ಹಾನಿ ಆಗುತ್ತದೆ. ಮೃತ ವ್ಯಕ್ತಿಯ ತಪ್ಪಿನಿಂದ ಅಪಘಾತ ಆಗಿರುವುದಿಲ್ಲ ಎಂದರೆ ಸರಿಯಲ್ಲ. ಪಾಲಿಸಿಯ ಯಾವುದೇ ಷರತ್ತುಗಳ ಉಲ್ಲಂಘನೆ ಆಗಿರುವುದಿಲ್ಲ ಎಂದರೆ ಸರಿಯಲ್ಲ. ಅಪಾದಿತ ವಾಹನಕ್ಕೆ ಅಪಘಾತದ ದಿನ ಪಾಲಿಸಿ ಚಾಲ್ತಿಯಲ್ಲಿರುವುದರಿಂದ ಅರ್ಜಿದಾರರಿಗೆ ಪರಿಹಾರ ಹಣ ಕೊಡಲು ಬಾದಸ್ಥರಾಗಿರುತ್ತೇವೆ ಎಂದರೆ ಸರಿಯಲ್ಲ.

**ಪಾಟೀಸವಾಲುಃ ಶ್ರೀ ಬಿ ಜಿ ಕೆ 4 ನೇ ಎದುದಾರರ ಪರ ವಕೀಲರಿಂದಃ**

ನಾನು ಇಂಜೆನಿಯರಿಂಗ್ ಪದವೀದರ. ನಾನು ಲೈನೆನ್ಸಿಯೇಟ್ ಪರೀಕ್ಷೆಯನ್ನು ಮಾಡಿರುತ್ತೇನೆ. ನಾನು ನ್ಯಾಯಾಲಯದಲ್ಲಿ ಹಾಜರುಪಡಿಸಿದ ಎಲ್ಲಾ ದಾಖಲೆಗಳನ್ನು ಹಾಗೂ ಅಪಾದಿತ ವಾಹನಕ್ಕೆ ಸಂಬಂದಿಸಿದ ದಾಖಲೆಗಳನ್ನು ಪರಿಶೀಲಿಸಿರುತ್ತೆನೆ. ನಿಪಿ 6 ರ ಪ್ರಕಾರ ಐ ಎಂ ಟಿ ಅಡಿಯಲ್ಲಿ ಪ್ರೀಮಿಯಂ ನ್ನು ಪಡೆದಿರುತ್ತೇವೆ ಎಂದರೆ ಸರಿ. ಈಗ ನಾನು ನೋಡುತ್ತಿರುವ ಟ್ರಾಕ್ಟರ್ ಮತ್ತು ಟ್ರೈಲರ್ ನ ಪಾಲಿಸಿಯಾಗಿರುತ್ತದೆ. ಸಾಕ್ಷಿದಾರರು ಸದರಿ ದಾಖಲೆಯನ್ನು ತಮ್ಮದೇ ಎಂದು ಒಪ್ಪಿಕೊಂಡಿದ್ದು ಅದನ್ನು ನಿ ಆರ್ 8 ಎಂದು ಗುರುತಿಸಲಾಯಿತು. ನಿ ಆರ್ 8 ರಲ್ಲಿ ಯಾವ ಐ ಎಂ ಟಿ ಅಡಿಯಲ್ಲಿ ಟ್ರಾಕ್ಟರ್ ಗೆ ಹಾಗೂ ಟ್ರೇಲರ್ ಗೆ ಪ್ರೀಮಿಂಯನ್ನು ಪಡೆದುಕೊಂಡಿರುತ್ತೀರಿ ಎಂದರೆ ಐ ಎಂ ಟಿ 28 ರಡಿಯಲ್ಲಿ ಟ್ರಾಕ್ಟರ್ ಮತ್ತು ಟ್ರೈಲರ್ ಗೆ ಪ್ರೀಮಿಯಂ ಪಡೆದುಕೊಂಡಿರುತ್ತೇವೆ. ನಿ ಆರ್ 8 ರ ಪಾಲಿಸಿಯನ್ನು

ಎಜೆಂಟ್ ಮೂಲಕ ವಿತರಿಸಲಾಗಿದೆ. ನಿ ಆರ್ 8 ರ ಪ್ರಕಾರ ಟ್ರಾಕ್ಟರ್ ಮತ್ತು ಟ್ರೈಲರ್ ಗೆ ಪ್ರತ್ಯೇಕವಾಗಿ ಪ್ರೀಮಿಯಂ ಮೊತ್ತವನ್ನು ಪಡೆದುಕೊಂಡಿರುತ್ತೇವೆ ಎಂದರೆ ಸರಿ. ನಿ ಆರ್ 3 ಮತ್ತು 4 ರ ಪ್ರಕಾರ ಅಪಾದಿತ ಟ್ರಾಕ್ಟರ್ ಗೆ ಅಪಾದಿತ ಟ್ರಾಲಿ ಮತ್ತು ಅಪಾದಿತ ಟ್ರಾಲಿ ಗೆ ಅಪಾದಿತ ಟ್ರಾಕ್ಟರ್ ಇತ್ತು ಎಂದು ನಮೂದಿಸಲಾಗಿದೆ ಎಂದರೆ ಸರಿ. ನಿ ಆರ್ 8 ರ ಪ್ರಕಾರ ಟ್ರೇಲರ್ ಗೆ ಐ ಡಿ ವಿ ಅಂತ ಪ್ರೀಮಿಯಂ ಪಡೆದಿರುತ್ತೇವೆ ಎಂದರೆ ಸಾಕ್ಷಿ ಗೊತ್ತಿಲ್ಲದ ಟ್ರೇಲರ್ ಗೆ ಎಂದು ಹೇಳುತ್ತಾರೆ.

ಯಾವುದೇ ವಾಹನಕ್ಕೆ ಪಾಲಿಸಿ ವಿತರಿಸಬೇಕಾದರೆ ವಾಹನದ ಮಾಲಿಕರ ಮತ್ತು ವಾಹನದ ವಿವರಗಳನ್ನು ಪಡೆದುಕೊಂಡು ಪಾಲಿಸಿ ವಿತರಿಸುತ್ತೇವೆ ಎಂದರೆ ಸರಿ. ಸಾಕ್ಷಿ ಮುಂದುವರಿದು ಹೊಸ ವಾಹನಗಳಿಗೆ ಪ್ರಪ್ರೋಜಲ್ ಫಾರಂಗಳನ್ನು ವಾಹನ ಮಾಲಿಕರಿಂದ ಪಡೆದುಕೊಳ್ಳುತ್ತೇವೆ ನವೀಕರಿಸಬೇಕಾದ ಪಾಲಿಸಿಗಳಿಗೆ ವಿವರಗಳ ಬಗ್ಗೆ ಪ್ರಪೋಜಲ್ ಪಡೆದುಕೊಳ್ಳುವುದಿಲ್ಲ. ಗೊತ್ತಿಲ್ಲದ ಟ್ರೇಲರ್ ಗೆ ಪಾಲಿಸಿ ವಿತರಿಸಿರುತ್ತೇವೆ ಎಂದು ಹೇಳಿದ್ದು, ಸದರಿ ಟ್ರೇಲರ್ ಗೆ ಮಾಲಿಕರು ಕೊಟ್ಟ ಪ್ರಪೋಜಲ್ ಪಾರಂ ನ್ನು ಹಾಜರುಪಡಿಸಲು ತೊಂದರೆ ಇಲ್ಲ ಎಂದರೆ ಸಾಕ್ಷಿ ಅವರು ಕೊಟ್ಟಿದ್ದರೆ ಹಾಜರುಪಡಿಸುತ್ತೇನೆ ಎಂದು ಹೇಳುತ್ತಾರೆ. ಅಂಡರ್ ರೈಟಿಂಗ್ ಟೀಮ್ ನವರು ಕೊಟ್ಟರೆ ಹಾಜರುಪಡಿಸುತ್ತೇನೆ. ಅಂಡರ್ ರೈಟಿಂಗ್ ಟೀಮ್ ರವರನ್ನು ನ್ಯಾಯಾಲಯದಲ್ಲಿ ಸಾಕ್ಷಿ ವಿಚಾರಣೆ ಮಾಡಿಸಲು ನನಗೆ ತೊಂದರೆ ಇಲ್ಲ. ನಿ ಆರ್ 7 ನ್ನು ನಮ್ಮ ತನಿಖಾದಿಕಾರಿಯಿಂದ ಪಡೆದುಕೊಂಡಿರುತ್ತೇನೆ. ನಿ ಆ್ರ್ 7 ನ್ನು ನಮ್ಮ ತನಿಖಾದಿಕಾರಿ ಆರ್ ಟಿ ಒ ಅಥವಾ ಆನ್ ಲೈನ್ ಮುಖಾಂತರ ಪಡೆದುಕೊಂಡಿರುತ್ತಾರೆ. ನಿ ಆ್ರ್ 7 ರ ಸಂಬಂದಪಟ್ಟಂತೆ ಆರ್ ಟಿ ಒ ರವರನ್ನು

ಸಾಕ್ಷಿ ವಿಚಾರಣೆ ಮಾಡಿಸಲು ತೊಂದರೆ ಇಲ್ಲ ಎಂದರೆ ಸರಿ. ದೋಷಾರೋಪಣೆ ಪತ್ರದ ಪ್ರಕಾರ ಟ್ರಾಕ್ಟರ್ ನ ಮುಂಭಾಗದಿಂದ ಅಪಘಾತವಾಗಿದೆ ಎಂದರೆ ಸರಿಯಲ್ಲ. ಎದುರುದಾರರ ನಂಬರ್ 1 ರವರಿಗೆ ನೋಟಿಸು ಕೊಟ್ಟು ದಾಖಲೆಗಳನ್ನು ಹಾಜರುಪಡಿಸಲು ಕೇಳಿರುತ್ತೇವೆ ಎಂದು ಹೇಳಿದ್ದು, ಅವರು ಹಾಜರುಪಡಿಸಿದ ದಾಖಲೆಗಳ ಬಗ್ಗೆ ನನಗೆ ಮಾಹಿತಿ ಇಲ್ಲ. ಎದುರುದಾರ 1 ನಮ್ಮ ನೋಟಿಸಿನಲ್ಲಿ ಹೇಳಿದ ದಾಖಲೆಗಳನ್ನು ನಾಯಾಲಯಕ್ಕೆ ಹಾಜರುಪಡಿಸಿದ್ದರೆ ಆ ದಾಖಲೆಗಳ ಬಗ್ಗೆ ನಮ್ಮ ತಕರಾರು ಇಲ್ಲ. ಉದ್ದೇಶಪೂರ್ವಕವಾಗಿ ಟ್ರೇಲರ್ ಗೆ ಸಂಬಂದಪಟ್ಟ ದಾಖಲೆಗಳನ್ನು ಮರೆಮಾಚಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಅಪಘಾತದ ದಿನ ಟ್ರಾಕ್ಟರ್ ಮತ್ತು ಟ್ರೇಲರ್ ಗೆ ನಮ್ಮ ಕಂಪನಿಯಿಂದ ಪಾಲಿಸಿ ಚಾಲ್ತಿಯಲ್ಲಿದ್ದು ಪರಿಹಾರ ಮೊತ್ತ ಹೆಚ್ಚು ಇರುವುದರಿಂದ ನಮ್ಮ ಬಾಧ್ಯತೆಯಿಂದ ತಪ್ಪಿಸಿಕೊಳ್ಳುವ ಸಲುವಾಗಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನಿ ಆ್ಆರ್ 7 ಸೃಷ್ಟಿಸಿ ಹಾಜರುಪಡಿಸಿದ ದಾಖಲೇ ಎಂದರೆ ಸರಿಯಲ್ಲ.

**ಮರುವಿಚಾರಣೆ ಇಲ್ಲ**.

(ಸಾಕ್ಷಿ ಕೊಟ್ಟ ಸಾಕ್ಷ್ಯವನ್ನು ಬಹಿರಂಗ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಗಣಕೀಕರಿಸಿದೆ)

(ಸಾಕ್ಷಿಗೆ ಸಾಕ್ಷ್ಯವನ್ನು ಓದಿ ಕೇಳಿ ಸರಿ ಇದೆ ಎಂದು ಒಪ್ಪಿದ್ದಾರೆ)

ಹಿರಿಯ ಸಿವಿಲ್ ನ್ಯಾಯಾಧೀಶರು
ಮತ್ತು ಎಂ.ಎ.ಸಿ.ಟಿ., ತಿ.ನರಸೀಪುರ.